ಸ್ವಾಮಿಯ ದರ್ಶನ ಬೆಳಿಗ್ಗೆಯೇ ಮುಗಿದಿತ್ತು. ಉಪಹಾರ ಮುಗಿಸಿಯೇ ಪಾತಾಳ ಗಂಗೆಯಲ್ಲಿ ಸ್ನಾನ ಮಾಡಿ ಬರಲು ನಿರ್ಧರಿಸಿ ಸಹ ಯಾತ್ರಿಗಳೊಂದಿಗೆ ದಾಸೋಹದ ಛತ್ರ ಪ್ರವೇಶಿಸಿದೆವು. ಛತ್ರದ ಒಂದು ಮೂಲೆಯಲ್ಲಿ ನನ್ನ ಮಿತ್ರರಾದ ಶಿವಪ್ಪನವರು ಕೆಲವು ದಿನಗಳ ಹಿಂದೆ ಖರೀದಿಸಿದ್ದ ಹೊಸ ಚಪ್ಪಲಿ ಬಿಟ್ಟು ಉಪಹಾರಕ್ಕಾಗಿ ಸಾಲಿನಲ್ಲಿ ನಮ್ಮೊಂದಿಗೆ ಸೇರಿಕೊಂಡರು. ದೇವರಿಗೆ ಬಂದ ಜನರಲ್ಲಿ ಒಳ್ಳೆಯ ಭಾವನೆ ಇರುತ್ತದೆ, ಯಾರೂ ದೇವರ ಸನ್ನಿಧಿಯಲ್ಲಿ ಚಪ್ಪಲಿ ಕದಿಯುವ ಕೆಲಸ ಮಾಡುವುದಿಲ್ಲ ಎಂಬ ನಂಬಿಕೆ ಎಲ್ಲರಲ್ಲಿ ಇತ್ತು. ಹೀಗಾಗಿ ಉಪಹಾರಕ್ಕಾಗಿ ಸಾಲಿನಲ್ಲಿ ಆರಾಮಾಗಿ ನಿಂತಿದ್ದೆವು. ಒಂದೈದು ನಿಮಿಷ ಕಳೆದಿರಬಹುದು. ಉಪಹಾರಕ್ಕಾಗಿ ಬರುವ ಜನರ ಸಂಖ್ಯೆ ಹೆಚ್ಚಾದಂತೆ ಕಾಣಿಸಿತು. ಹಾಲಿನಲ್ಲಿ ನಿಂತಿದ್ದ ಶಿವಪ್ಪನವರ ಲಕ್ಷ್ಯವೂ ಚಪ್ಪಲಿ ಬಿಟ್ಟ ಜಾಗದ ಕಡೆಗೆ ಹೋಯಿತು. ನೋಡಿದರೆ ಚಪ್ಪಲಿಗಳು ಮಾಯ. ಅವರ ಚಪ್ಪಲಿಯ ಜಾಗದಲ್ಲಿ ಹಳೆಯ ಜೋಡುಗಳು ಬಂದು ಠಿಕಾಣಿ ಹೂಡಿದ್ದವು! ಸುತ್ತಮುತ್ತ ಹುಡುಕಿದರೂ ಶಿವಪ್ಪನವರ ಹೊಸ ಚಪ್ಪಲಿಗಳು ಕಾಣದಾಗಿ ಎಲ್ಲರಲ್ಲೂ ಅಸಹನೆ ಮೂಡಿತು. 'ಪಾಪ ಕಳೆಯಲು ಪರ್ವತ ಮಲ್ಲಯ್ಯಗ ಬಂದ್ರೂ ಇಲ್ಲಿಯೂ ಚಪ್ಪಲಿ ಕಳವು ಮಾಡುತ್ತಾರಲ್ಲ?' ಎಂದು ಪರಸ್ಪರ ಮಾತಾಡುತ್ತಾ ಉಪಹಾರ ಸೇವಿಸಿದೆವು. 'ಚಲೂ ಆತು ನಡಿರಿ ಇನ್ನ, ನಿಮ್ಮ ಪಾಪನೆಲ್ಲ ಕದ್ದುಕೊಂಡ ಹೋದವರ ತಲಿ ಮ್ಯಾಲ ಮಲ್ಲಯ್ಯ ಹೊರ್ರಿಸಿಬಿಟ್ಟಾನಂತ ತಿಳ್ಕೋರಿ...' ಶಿವಪ್ಪನವರಿಗೆ ಸಹ ಪ್ರಯಾಣಿಕರು ಹಾಸ್ಯ ಮಾಡಿದರು. 'ಹೀಂಗ ತಿಳಿಕೊಳ್ಳಲಿಕ್ಕಂತೂ ಬರತಾದ, ಆದರ ಇನಾ ಎರಡ ದಿನಾ ಇಲ್ಲೆ ತಿರುಗಾಡುದು ಅದ. ಈ ಕೆಟ್ಟ ಬಿಸಿಲಿನಾಗ ಚಪ್ಪಲಿ ಇಲ್ಲದ ಹ್ಯಾಂಗ ಅಡ್ಡಾಡುದಂತ ನನಗ ಚಿಂತ್ಯಾಗೇದ...' ಎಂದು ಶಿವಪ್ಪನವರು ಚಪ್ಪಲಿ ಕಳುವಾದ ಆಘಾತದಿಂದ ಸುಧಾರಿಸಿಕೊಂಡು ಹೇಳಿದರು. 'ನೋಡ್ರಿ ದೇವ್ರಿಗೆ ಬಂದೀರಿ. ಹೊಸ ಚಪ್ಪಲಿ ಈಗ ತಗೋಬಾರದು. ಒಂದು ವೇಳೆ ತಗೊಂಡ್ರ, ಅರಿಷ್ಟನ್ನು ಮನಿಗೆ ತಗೊಂಡ ಹೋದಂಗಾಗ್ತದ...' ಆಸ್ತಿಕ ಮಿತ್ರರೊಬ್ಬರ ಮಾತು ಶಿವಪ್ಪನವರಿಗೆ ಬಿಸಿತುಪ್ಪವಾಗಿ ಪರಿಣಮಿಸಿತು. ಹಾಗೂ ಹೀಗೂ ಒಂದಿಷ್ಟು ಸಮಯ ಬರಿಗಾಲಿನಿಂದಲೇ ಶಿವಪ್ಪ ಅಡ್ಡಾಡಿದರು. ಮೇ ತಿಂಗಳ ಬಿರುಬಿಸಿಲು ನೆತ್ತಿಸುಡುತ್ತಿತ್ತು. ಸೂರ್ಯನ ಶಾಖದಿಂದ ಕಾಯ್ದ ಡಾಂಬರ ರಸ್ತೆಯಲ್ಲಿ ನಡೆದರೆ ಬೆಂಕಿಯ ಮೇಲೆ ಕಾಲಿಟ್ಟ ಅನುಭವ ತಾಳಿಕೊಳ್ಳುತ್ತ ಪಾತಾಳ ಗಂಗೆಯ ಮೆಟ್ಟಿಲು ಇಳಿದು ಸ್ನಾನ ಮುಗಿಸಿ ಮೇಲೇರಿ ಬಂದಾಗ ಶಿವಪ್ಪನವರ ಸಂಕಟ ಆ ವೆಂಕಟರಮಣನೂ ನಿವಾರಿಸಲಾರದಂತಾಗಿತ್ತು! ಲುಗುಬಗೆಯಿಂದ ಹೆಜ್ಜೆ ಹಾಕುತ್ತಾ ನೀಲಗಿರಿ ಗಿಡದ ಚದುರಿದ ನೆರಳಿನಲ್ಲಿ ನಿಂತರು. ಬಿಸಿಲಿನ ಶಾಖದಿಂದ ಅಂಗಾಲುಗಳು ಉರಿಯಲಾರಂಭಿಸಿದ್ದವು. ಅವರ ಚಡಪಡಿಕೆ ಮರೆಸಲೆತ್ನಿಸಿ ಒಂದಿಷ್ಟು ಹಾಸ್ಯದ ದಾಟಿಯಲ್ಲಿ 'ಮಲ್ಲಯ್ಯ ಚಲೂ ಶಿಕ್ಷಾ ಕೊಟ್ಟಾನ ಬಿಡ್ರಿ ನಿಮಗ!...' ನಾನೆಂದೆ. ಆಗ ಶಿವಪ್ಪನವರು 'ನನಗ ಇಂಥಾ ಶಿಕ್ಷಾ ಕೊಡ್ಲಾಕ್ ನಾನೇನ್ ಅಂಥಾ ತಪ್ಪ ಮಾಡೇನ್ರಿ?' ನಗುತ್ತಲೇ ಕೇಳಿದರು. 'ಅಲ್ಲಾ ನೀವು ಮಲ್ಲಯ್ಯನ ದರ್ಶನ ತಗೊಳ್ಳಾಕ ಬಂದ್ರಿ. ಆದರ ನಮ್ಮ ವೈನಿಯವರನ್ನು ಮನೆಯಲ್ಲಿ ಬಿಟ್ಟ ಬಂದೀರಿ. ಇದು ತಪ್ಪು ಅಲ್ಲೇನು ನಿಮ್ಮದು' ನಾನು ನಕ್ಕು ಹೇಳಿದಾಗ ಇತರ ಯಾತ್ರಿಕರು ದನಿಗೂಡಿಸಿ ನಕ್ಕರು. 'ದೇವ್ರಿಗೆ ಬಂದ್ರೂನೂ ಇಲ್ಲಿಯೂ ಪಾಪದ ಕೆಲಸ ಮಾಡ್ತಾರಲ್ಲ ಈ ನಮ್ಮ ಜನರಿಗೆ ಏನನ್ನಬೇಕು?' ಶಿವಪ್ಪನವರು ಅಲವತ್ತುಕೊಂಡಾಗ 'ನೀವು ಏನ್ ಅಂದ್ರೂ ತಗೊಂಡ ಹ್ವಾದವ್ರು ತಿರುಗಿ ತಂದು ಕೊಡುದಿಲ್ಲ. ಹೊಸ ಚಪ್ಪಲಿ ಅಂತೂ ಮೊದ್ಲ ತಗೊಳ್ಳಾಕ ಬರೂದಿಲ್ಲ... ಅಲ್ಲದೆ ಬರಿ ಕಾಲಿನಿಂದ ನಡಿಲಾಕ ನಿಮ್ಮಿಂದ ಇನ್ನ ಸಾಧ್ಯನ ಇಲ್ಲಂತ ಕಾಣಿಸ್ತದ ಅದಕ್ಕ ನಾನೊಂದು ಉಪಾಯ ಹೇಳ್ತೀನಿ... ಹಾಂಗ ಮಾಡಿದ್ರ ಈ